# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1661 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14/03/2022 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಬ್ರಿಮ್ಸ್ ಮಹಾವಿದ್ಯಾಲಯದಲ್ಲಿ ಬೋಧಕ/ ಬೋಧಕೇತರ ಹುದ್ದೆಗಳಿಗೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಭರ್ತಿಯಾಗಿದ್ದು ಎಷ್ಟು; (ವೃಂದವಾರು ಮಾಹಿತಿ ಒದಗಿಸುವುದು) | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮಂಜೂರಾದ/ಭರ್ತಿಯಾದ ಹುದ್ದೆಗಳ ವಿವರವಾದ ಮಾಹಿತಿ ಈ ಕೆಳಕಂಡಂತಿರುತ್ತದೆ. |

**ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್**

| ವೃಂದ | ಮಂಜೂರಾತಿ | ಕರ್ತವ್ಯ ನಿರತ | ಖಾಲಿ ಹುದ್ದೆಗಳು |
|---|---|---|---|
| ಎ | 243 | 232 | 15 |
| ಬಿ | 08 | 03 | 05 |
| ಸಿ | 430 | 315 | 115 |
| ಡಿ | 83 | 83 | 00 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಅದರಲ್ಲಿ ಖಾಯಂ ಆದ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; | |

| ವೃಂದ | ಖಾಯಂ ಸಿಬ್ಬಂದಿಗಳ ಸಂಖ್ಯೆ | ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|
| ಎ | 104 | 00 |
| ಬಿ | 03 | 00 |
| ಸಿ | 270 | 71 |
| ಡಿ | 01 | 82 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಈ ಮಹಾವಿದ್ಯಾಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅನೇಕ ಸಿಬ್ಬಂದಿಗಳ ಕಳೆದ 6 ತಿಂಗಳಿಂದ ಸಂಬಳವಿಲ್ಲದೆ ಪರದಾಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಈ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಇರುವುದನ್ನು ಗಮನಿಸಿ 1) M/s Manjeera Engg. & Construction Company, Private Limited, Bidar ಇವರ ಕಂಪನಿ ರವರಿಂದ 96 ಗ್ರೂಪ್ ಡಿ ಸಿಬ್ಬಂದಿಗಳನ್ನು ಸರ್ಕಾರದಿಂದ ಮಂಜೂರಾತಿಯಾಗದೇ ಇರುವುದರಿಂದ 96 ಗ್ರೂಪ್ ಡಿ ಗಳ ಸೇವೆಯನ್ನು ದಿನಾಂಕ:28-02-2022ರಂದು ಸ್ಥಗಿತಗೊಳಿಸಲಾಗಿದೆ. 2) ಬೀದರ್ ಜಿಲ್ಲಾ ವಿವಿದೋದ್ದೇಶ ಸಹಕಾರ ಸಂಘ (ನಿ) ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೀದರ್ ರವರ |

| | | |
|---|---|---|
| | | ಮುಖಾಂತರ ಪಡೆಯಲಾಗುತ್ತಿರುವ 38 ಹೆಚ್ಚುವರಿ ಹುದ್ದೆಗಳ ಸೇವೆಯನ್ನು ದಿನಾಂಕ:01.03.2022ರಿಂದ ಜಾರಿಗೆ ಬರುವಂತೆ ಹಿಂಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರುರವರಿಗೆ ಮನವಿ ಸಲ್ಲಿಸಲಾಗಿರುತ್ತದೆ. 3) ಉಳಿದ ಹೊರ ಮತ್ತು ಒಳ ರೋಗಿಗಳ ವಿಭಾಗದ ನಿರ್ವಾಹಣಾ ಹೆಚ್ಚುವರಿ ಸಿಬ್ಬಂದಿಗಳ ಸೇವೆಯನ್ನು ನಿಯಾಮಾನುಸಾರ ಹಿಂಪಡೆಯಲಾಗುವುದು. M/s Manjeera Engg. & Construction Company, Private Limited, Bidar ಇವರ ಮುಖಾಂತರ ಪಡೆಯಲಾಗುತ್ತಿದ್ದ 96 ಹುದ್ದೆಗಳ ವೇತನ ಹೊರತುಪಡಿಸಿ, (ಏಪ್ರಿಲ್-2021 ರಿಂದ ವೇತನ ಪಾವತಿ ಮಾಡಲಾಗಿರುವುದಿಲ್ಲ) ಇನ್ನುಳಿದ ಗ್ರೂಪ್-ಡಿ ಸಿಬ್ಬಂದಿಗಳಿಗೆ ಜನವರಿ-2022ರ ವರೆಗೆ ವೇತನ ಪಾವತಿ ಮಾಡಲಾಗಿರುತ್ತದೆ. |
| ಈ) | ಈ ಮಹಾವಿದ್ಯಾಲಯಕ್ಕೆ ಪ್ರಭಾರಿ ನಿರ್ದೇಶಕರನ್ನು ನೇಮಕ ಮಾಡುವಲ್ಲಿ ಸುಮಾರು 40 ಲಕ್ಷ ರೂಪಾಯಿ ಭ್ರಷ್ಟಚಾರ ನಡೆದಿದೆ ಎಂದು ಟಿ.ವಿ ಮಾಧ್ಯಮಗಳಲ್ಲಿ ಹೇಳಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು? | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

<u>ಕಡತ ಸಂ: ಎಂಇಡಿ 116 ಎಂ ಎಸ್ ಎಫ್ 2022</u>

(ಡಾ|| ಕೆ. ಸುಧಾಕರ್)
ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.